# ಅಧಿಕ ರಕ್ತಸ್ರಾವಕ್ಕೆ ಚಿಕಿತ್ಸೆ (ಎಂಡೋಮೆಟ್ರಿಯಲ್ ಅಬ್ಲೇಷನ್)


– ಡಾ|| ಬಿ. ರಮೇಶ್



ಎಂಡೊಮೆಟ್ರಿಯಂ ಎಂಬುದು ಗರ್ಭಕೋಶದ ಒಳಭಾಗದ ಪದರ. ಅದನ್ನು ವೈದ್ಯ ಭಾಷೆಯಲ್ಲಿ ‘ಎಂಡೊಮೆಟ್ರಿಯಲ್ ಲೈನಿಂಗ್’ ಎಂದು ಕರೆಯಲಾಗುತ್ತದೆ.

ಎಂಡೊಮೆಟ್ರಿಯಂನಲ್ಲಿ ಪ್ರತಿ ತಿಂಗಳೂ ಪೊರೆ ನಿರ್ಮಾಣವಾಗುವುದು ಹಾಗೂ ರಕ್ತಸ್ರಾವದ ಮೂಲಕ ಅದು ಹೊರಹೊಗುತ್ತಿರುತ್ತದೆ. ಹೀಗೆ ಅಲ್ಲಿ ಪುನರ್ ನಿರ್ಮಾಣ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ.

ಋತುಚಕ್ರದ ಸಂದರ್ಭದಲ್ಲಿ ಕೆಲವು ಮಹಿಳೆಯರಿಗೆ 3–4 ದಿನಗಳ ಕಾಲ ನಿಗದಿತ ಪ್ರಮಾಣದಲ್ಲಿ ರಕ್ತಸ್ರಾವ ಆಣುತ್ತಿರುತ್ತದೆ. ಇನ್ನು ಕೆಲವರಿಗೆ ಹೆಚ್ಚಿನ ಪ್ರಮಾಣದಲ್ಲಿ ರಕ್ತಸ್ರಾವ ಆಣುತ್ತಿರುತ್ತದೆ. ಅತಿಯಾದ ಪ್ರಮಾಣದಲ್ಲಿ ರಕ್ತಸ್ರಾವ ಆಗುವ ಸ್ಥಿತಿಯನ್ನು ‘ಮೆನೋರೇಜಿಯಾ’ ಎಂದು ಹೇಳಲಾಗುತ್ತದೆ. ಋತುಚಕ್ರದ ಸಂದರ್ಭದಲ್ಲಿ 5–7 ದಿನದವರೆಗೂ ಅಷ್ಟಿಷ್ಟು ಪ್ರಮಾಣದಲ್ಲಿ ರಕ್ತಸ್ರಾವ ಆಗುತ್ತಿದ್ದರೆ ಅಂತಹದೇನೂ ಸಮಸ್ಯೆ ಆಣುವುದಿಲ್ಲ. ಆದರೆ ಅದಕ್ಕೂ ಹೆಚ್ಚಿನ ದಿನಗಳ ಕಾಲ ರಕ್ತಸ್ರಾವ ಆಗುತ್ತಿದ್ದರೆ ಅಂತಹದೇನೂ ಸಮಸ್ಯೆ ಆಗುವುದಿಲ್ಲ. ಆದರೆ ಅದಕ್ಕೂ ಹೆಚ್ಚಿನ ದಿನಗಳ ಕಾಲ ರಕ್ತಸ್ರಾವವಾಗುತ್ತಿದ್ದರೆ, ಅದು ಗರ್ಭಕೋಶಕ್ಕೆ ಮಾರಕವಾಗಿ ಪರಿಣಮಿಸುತ್ತದೆ. ಸಂತಾನೋತ್ಪತ್ತಿ ಪ್ರಕ್ರಿಯೆ ಪೂರ್ಣಗೊಳಿಸದ ಮಹಿಳೆಯರಿಗೆ ಅತಿಯಾಗಿ ರಕ್ತಸ್ರಾವವಾಗುತ್ತಿದ್ದರೆ, ಅದನ್ನು ತಡೆಗಟ್ಟಲು ವೈದ್ಯರು ‘ಎಂಡೊಮೆಟ್ರಿಯಲ್ ಅಬ್ಲೇಷನ್’ ಎಂಬ ವಿಧಾನವನ್ನು ಅನುಸರಿಸುತ್ತಾರೆ. ಮಹಿಳೆಯೊಬ್ಬಳ ಗರ್ಭಕೋಶವನ್ನು ಉಳಿಸಲು ವೈದ್ಯರು ಈ ವಿಧಾನಕ್ಕೆ ಮೊರೆ ಹೋಗುತ್ತಾರೆ.




**ಸಮಸ್ಯೆ ಏನು?**

ಗರ್ಭಕೋಶದ ಒಳಭಾಗದ ಪದರ (ಎಂಡೊಮೆಟ್ರಿಯಲ್) ಹಾರ್ಮೋನು ಅಸಮತೋಲನ ಕಾರಣದಿಂದ ದಪ್ಪಗಾಗಬಹುದು. ಈ ಕಾರಣದಿಂದಲೇ ಅಂತಹ ಮಹಿಳೆಯರಿಗೆ ಅತಿಯಾಗಿ ರಕ್ತಸ್ರಾವವಾಗುತ್ತಿರುತ್ತದೆ.

ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹಾಗೂ ಹೆಚ್ಚಿನ ದಿನಗಳ ಕಾಲ ರಕ್ತಸ್ರಾವ ಮುಂದುವರಿದಲ್ಲಿ ಮಹಿಳೆಯರು ಅದನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಮಾಡಬಾರದು. ತಕ್ಷಣವೇ ಸ್ತ್ರೀರೋಗ ತಜ್ಞರ ಬಳಿ ಹೋಗಿ ರಕ್ತಸ್ರಾವಕ್ಕೆ ಏನು ಕಾರಣ ಅಂತ ಕಂಡುಕೊಳ್ಳಬೇಕು. ವೈದ್ಯರು ಹಾರ್ಮೋನ್ ಟೆಸ್ಟ್, ಥೈರಾಯ್ಡ್ ಟೆಸ್ಟ್ ಮುಂತಾದವುಗಳನ್ನು ಮಾಡಿಸಿ, ಅದರ ನಿಖರ ಕಾರಣವನ್ನು ಕಂಡು ಹಿಡಿಯುತ್ತಾರೆ.

ಹಾರ್ಮೋನು ಅಸಮತೋಲನದಿಂದ ರಕ್ತಸ್ರಾವದ ಸಮಸ್ಯೆ ಇದ್ದರೆ ವೈದ್ಯರು ಔಷಧಿ ಚಿಕಿತ್ಸೆಯ ಮುಂದಿನ ಹಂತ ಅನುಸರಿಸುತ್ತಾರೆ. ಇದು ಗರ್ಭಕೋಶ ನಿವಾರಣೆ ಮಾಡುವುದಕ್ಕಿಂತ ಹಿಂದಿನ ಹಂತ ಕೂಡ ಆತದೆ. ಇದನ್ನು ಒಂದು ರೀತಿಯಲ್ಲಿ ಎರಡರ ನಡುವಿನ ದಾರಿ ಎಂದೂ ಹೇಳಲಾಗುತ್ತಿದೆ.

**ಏನಿದು ಚಿಕಿತ್ಸೆ?**

ಗರ್ಭಕೋಶದ ಒಳಭಾಗದ ಎಂಡೊಮೆಟ್ರಿಲ್ ಪದರ ಅಥವಾ ಲೈನಿಂಗ್ ದಪ್ಪಗಾಗುತ್ತಾ ಹೋದಂತೆ ರಕ್ತಸ್ರಾವದ ಪ್ರಮಾಣವೂ ಹೆಚ್ಚುತ್ತಾ ಹೋಗುತ್ತದೆ. ಇದೇ ಸ್ಥಿತಿ ಮುಂದುರಿದರೆ ಅದು ಗರ್ಭಕೋಶಕ್ಕೆ ಅಪಾಯಕಾರಿಯಾಗಿ ಪರಿಣಮಿಸುತ್ತದೆ. ಗರ್ಭಕೋಶವನ್ನೇ ತೆಗೆದುಹಾಕಬೇಕಾದ ಪ್ರಸಂಗ ಬರಬಹುದು. ಆಗ ವೈದ್ಯರು ‘ಎಂಡೊಮೆಟ್ರಿಯಲ್ ಅಬ್ಲೇಷನ್’ ವಿಧಾನ ಅನುಸರಿಸಿ ರಕ್ತಸ್ರಾವದ ಸಮಸ್ಯೆಯಿಂದ ಆಕೆಯನ್ನು ಮುಕ್ತಗೊಳಿಸುತ್ತಾರೆ.

**ಏನಿದು ಎಂಡೊಮೆಟ್ರಿಯಲ್ ಅಬ್ಲೇಷನ್?**

ಗರ್ಭಕೋಶದ ಎಂಡೊಮೆಟ್ರಿಯಲ್ ಭಾಗದಲ್ಲಿ ಭಾರಿ ಪ್ರಮಾಣದಲ್ಲಿ ಬೆಳೆದ ಪದರ ಅಥವಾ ಲೈನಿಂಗ್‌ನ್ನು ಹಿಸ್ಟ್ರೋಸ್ಕೊಪಿ ವಿಧಾನದಲ್ಲಿ ನಿವಾರಿಸುವುದನ್ನೇ ‘ಎಂಡೊಮೆಟ್ರಿಯಲ್ ಅಬ್ಲೇಷನ್’ ಎಂದು ಕರೆಯಲಾಗುತ್ತದೆ.

ಪ್ರಕ್ರಿಯೆಯ ಆರಂಭದಲ್ಲಿ ಒಂದು ಬಗೆಯ ದ್ರವವನ್ನು ಗರ್ಭಕೋಶದ ಒಳಗಡೆ ಹರಿಬಿಟ್ಟು ಅಲ್ಲಿನ ಸ್ಥಿತಿಗತಿಯನ್ನು ಪರಿಶೀಲಿಸಲಾಗುತ್ತದೆ. ಬಳಿಕ ಎಲೆಕ್ಟ್ರೊ ಲೇಸರ್, ಥರ್ಮಲ್, ಕ್ರಯೋಕಾಟ್ರಿ ರೋಲರ್ ಬಾಲ್‌ನಿಂದ ಪದರವನ್ನು ನಿಧಾನವಾಗಿ ದಹಿಸಲಾಗುತ್ತದೆ. ಈ ಪ್ರಕ್ರಿಯೆಯ ಬಳಿಕ ರಕ್ತಸ್ರಾವದ ಪ್ರಮಾಣ ಶೇ.80ರ ತನಕ ನಿಲ್ಲುತ್ತದೆ.

ಎಂಡೊಮೆಟ್ರಿಯಲ್ ಅಬ್ಲೇಷನ್ ಮಾಡುವ ಮುನ್ನ ಆ ಮಹಿಳೆಗೆ ಗರ್ಭಾಶಯದ ಕ್ಯಾನ್ಸರ್ ಇಲ್ಲ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ. ಅಷ್ಟೇ ಅಲ್ಲ, ಈ ಚಿಕಿತ್ಸೆಗೆ ಒಳಗಾಗುವ ಮಹಿಳೆಯ ಕುಟುಂಬ ಪೂರ್ತಿಗೊಂಡಿರಬೇಕು. ಚಿಕಿತ್ಸೆಯ ಬಳಿಕ ತಾನು ಪುನಃ ಗರ್ಭಿಣಿಯಾಗಬೇಕೆಂದು ಮಹಿಳೆ ಇಷ್ಟಪಟ್ಟರೆ ‘ಎಂಡೊಮೆಟ್ರಿಯಲ್ ಅಬ್ಲೇಷನ್’ ಮಾಡಲಾಗುವುದಿಲ್ಲ. ಚಿಕಿತ್ಸೆಯ ಬಳಿಕ ಗರ್ಭ ಧರಿಸಿದರೆ ಗರ್ಭಪಾತವಾಗುವ ಸಾಧ್ಯತೆ ಇರುತ್ತದೆ. ಒಂದು ವೇಳೆ ಗರ್ಭಪಾತವಾಗದಿದ್ದರೂ ಮಗುವಿನ ಬೆಳವಣಿಗೆ ಸಮರ್ಪಕವಾಗಿರುವುದಿಲ್ಲ.

ಎಂಡೊಮೆಟ್ರಿಯಲ್ ಅಬ್ಲೇಷನ್ ವಿಧಾನವನ್ನು ಋತುಚಕ್ರ ಬಂದುಹೋದ ಬಳಿಕ ಕೈಗೊಳ್ಳಲಾಗುತ್ತದೆ. ಅನಸ್ಥೇಶಿಯಾ ಮೂಲಕ ಮಾಡುವ ಈ ಚಿಕಿತ್ಸೆಗೆ ಅರ್ಧಗಂಟೆಯ ಸಮಯ ಸಾಕು ಅದೇ ದಿನ ಮಹಿಳೆ ಮನೆಗೆ ತೆರಳಬಹುದಾಗಿದೆ.

ಈ ಚಿಕಿತ್ಸೆಯ ಬಳಿಕವೂ ಅಷ್ಟಿಷ್ಟು ಪ್ರಮಾಣದಲ್ಲಿ ರಕ್ತಸ್ರಾವ ಹಾಗೂ ಹೊಟ್ಟೆನೋವು ಇರುತ್ತದೆ. ಅದು ಕೂಡ ಕ್ರಮೇಣ ನಿಂತುಹೋಗುತ್ತದೆ.

‘ಎಂಡೊಮೆಟ್ರಿಯಲ್ ಅಬ್ಲೇಷನ್’ ಪ್ರಕ್ರಿಯೆ ಮಹಿಳೆಗೆ ರಕ್ತಸ್ರಾವದಿಂದ ಮುಕ್ತಿ ದೊರಕಿಸಿಕೊಡುತ್ತದೆ. ನೋವಿನಿಂದ ನಿರಾಳತೆ ಇರುತ್ತದೆ. ಇದರಿಂದ ಗರ್ಭಕೋಶ ತೆಗೆಯುವುದನ್ನು ತಡೆಗಟ್ಟಬಹುದು.

**ಎಂಡೊಮೆಟ್ರಿಯಲ್ ಅಬ್ಲೇಷನ್ ಶಸ್ತ್ರ ಚಿಕಿತ್ಸೆಯ ಹೆಚ್ಚಿನ ಮಾಹಿತಿ ಮತ್ತು ಚಿಕಿತ್ಸೆಗಾಗಿ ಸಂಪರ್ಕಿಸಿ:**

## ಆಲ್ಟಿಯಸ್ ಹಾಸ್ಪಿಟಲ್

( Unit of Dr. Ramesh Hospital)

**ಹೈಟೆಕ್ ಲ್ಯಾಪ್ರೋಸ್ಕೊಪಿ & ಗೈನೋಕಾಲಜಿ ಹಾಸ್ಪಿಟಲ್**

**ರಾಜಾಜಿನಗರ:**
ನಂ.6/63, 59ನೇ ಅಡ್ಡರಸ್ತೆ, 4ನೇ ಬ್ಲಾಕ್,
ರಾಜಾಜಿನಗರ ಎಂಟ್ರೆನ್ಸ್, ಎಂ.ಇ.ಐ. ಪಾಲಿಟೆಕ್ನಿಕ್ ಎದುರು,
ರಾಮಮಂದಿರ ಹತ್ತಿರ, ಬೆಂಗಳೂರು–10.
ಫೋ: 080-23151873 Mob: 9900031842

**ರಾಜರಾಜೇಶ್ವರಿನಗರ:**
ನಂ.915, 1ನೇ ಮಹಡಿ, ಧನುಷ್ ಪ್ಲಾಜಾ,
ಐಡಿಯಲ್ ಹೋಮ್ಸ್ ಟೌನ್‌ಷಿಪ್, ಗೋಪಾಲನ್‌ಮಾಲ್ ಹತ್ತಿರ,
ರಾಜರಾಜೇಶ್ವರಿನಗರ, ಬೆಂಗಳೂರು–98.
ಫೋ: 080-28606789 Mob: 9663311128

E-mail: endoram2006@yahoo.in, Website: www.laparoscopicsurgeries.com